ಕರ್ನಾಟಕ ಅರಣ್ಯ ಇಲಾಖೆ

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮುಖ್ಯಸ್ಥರು, ಅರಣ್ಯ ಪಡೆ) ಹಾಗೂ ಆಯ್ಕೆ ಪ್ರಾಧಿಕಾರ
ಇವರ ಕಚೇರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು–560003

**ಉಪ ವಲಯ ಅರಣ್ಯಾಧಿಕಾರಿ ಮತ್ತು ಅರಣ್ಯ ರಕ್ಷಕ ಹುದ್ದೆಗಳಿಗೆ ನೇರ ನೇಮಕಾತಿ**

**ಅಧಿಸೂಚನೆ ಸಂಖ್ಯೆ: ಬಿ9–ನೇಮಕಾತಿ–ವಿವ–3/2012–13 ದಿನಾಂಕ 21–12–2012 ಮತ್ತು**
**ಅಧಿಸೂಚನೆ ಸಂಖ್ಯೆ: ಬಿ9–ನೇಮಕಾತಿ–ವಿವ–4/2012–13 ದಿನಾಂಕ 13–03–2013**

# ಪ್ರಕಟಣೆ

113 ಉಪ ವಲಯ ಅರಣ್ಯಾಧಿಕಾರಿ ಮತ್ತು 329 ಅರಣ್ಯ ರಕ್ಷಕ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಪ್ರಕ್ರಿಯೆ ಕುರಿತು ಮೂಲ ದಾಖಲೆಗಳ ಪರಿಶೀಲನೆ, ದೈಹಿಕ ತಾಳ್ವಿಕೆ ಮತ್ತು ವೈದ್ಯಕೀಯ ಪರೀಕ್ಷೆಗಳನ್ನು ನಡೆಸಿ, ಈ ಪರೀಕ್ಷೆಗಳಲ್ಲಿ ಅರ್ಹತೆ ಹೊಂದಿದ 112 ಉಪ ವಲಯ ಅರಣ್ಯಾಧಿಕಾರಿ ಮತ್ತು 302 ಅರಣ್ಯ ರಕ್ಷಕ ಹುದ್ದೆಗೆ ಆಯ್ಕೆಗೊಂಡ ಅಭ್ಯರ್ಥಿಗಳನ್ನು ಮೆರಿಟ್ ಆಧಾರದ ಮೇಲೆ ಹಾಗೂ ಇಲಾಖಾ ವೃಂದ ಮತ್ತು ನೇಮಕಾತಿ ನಿಯಮಗಳು ಹಾಗೂ ಪ್ರಚಲಿತ ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳ ಅನ್ವಯ ಆಯ್ಕೆ ಮಾಡಿ, ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದೆ. ಬಾಕಿ ಉಳಿದ ಉಪ ವಲಯ ಅರಣ್ಯಾಧಿಕಾರಿ 1 ಹುದ್ದೆ ಹಾಗೂ ಅರಣ್ಯ ರಕ್ಷಕ 27 ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಮೆರಿಟ್ ಆಧಾರದಲ್ಲಿ ಹಾಗೂ ಮೀಸಲಾತಿ ನಿಯಮಗಳ ಅನ್ವಯ ಆಯ್ಕೆ ಮಾಡಿ ಸಧ್ಯದಲ್ಲಿಯೇ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗುವುದು.

ಆಯ್ಕೆಗೊಂಡ 112 ಉಪ ವಲಯ ಅರಣ್ಯಾಧಿಕಾರಿ ಹಾಗೂ 302 ಅರಣ್ಯ ರಕ್ಷಕ ಹುದ್ದೆಯ ಅಭ್ಯರ್ಥಿಗಳು ಕಾರ್ಯವರದಿ ಮಾಡಿಕೊಳ್ಳಬೇಕಾದ ವೃತ್ತ ಮತ್ತು ವಿಭಾಗದ ವಿವರವನ್ನು ಸಹ ತಿಳಿಸಲಾಗಿದೆ. ಆಯ್ಕೆಯಾದ ಅಭ್ಯರ್ಥಿಗಳು ಅವರ ಹೆಸರಿನ ಮುಂದೆ ತೋರಿಸಿರುವ ಕಚೇರಿಯ ಮುಖ್ಯಸ್ಥರ ಎದುರು ದಿನಾಂಕ 20–07–2015 ರೊಳಗಾಗಿ ಹಾಜರಾಗಿ ಮುಂದಿನ ನಿರ್ದೇಶನ ಪಡೆಯುವುದು. ವೃತ್ತಿ ತರಬೇತಿಯ ಕುರಿತು ಪೂರ್ಣ ಮಾಹಿತಿಯನ್ನು ಸಧ್ಯದಲ್ಲಿಯೇ ತಿಳಿಸಲಾಗುವುದು.

ಈ ಮಾಹಿತಿಯನ್ನು ಅರಣ್ಯ ಇಲಾಖೆಯ website: www.aranya.gov.in ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿರುತ್ತದೆ.

ಬೆಂಗಳೂರು,
ದಿನಾಂಕ: 14–07–2015

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಮುಖ್ಯಸ್ಥರು, ಅರಣ್ಯ ಪಡೆ)
ಹಾಗೂ ಆಯ್ಕೆ ಪ್ರಾಧಿಕಾರ.

ಸಂ: ಬಿ9–ನೇಮಕಾತಿ–ವಿವ–3/2012–13

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಮುಖ್ಯಸ್ಥರು, ಅರಣ್ಯ ಪಡೆ) ಇವರ ಕಚೇರಿ,
ಅರಣ್ಯ ಭವನ, ಮಲ್ಲೇಶ್ವರಂ,
ಬೆಂಗಳೂರು–3, ದಿನಾಂಕ: 14 –07–2015

ಇವರಿಗೆ:

**ಎಲ್ಲಾ ವೃತ್ತಗಳ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು,**
**ಸಂಬಂಧಿಸಿದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.**

ವಿಷಯ: 113 ಉಪ ವಲಯ ಅರಣ್ಯಾಧಿಕಾರಿ ಮತ್ತು 329 ಅರಣ್ಯ ರಕ್ಷಕ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳ ಮುಂದಿನ ಸ್ಥಳ ಹಂಚಿಕೆ ಹಾಗೂ ನೇಮಕಾತಿ ಆದೇಶ ನೀಡುವ ಕುರಿತು.

ಉಲ್ಲೇಖ:
1) ಅಧಿಸೂಚನೆ ಸಂಖ್ಯೆ: ಬಿ9–ನೇಮಕಾತಿ–ವಿವ–3/2012–13 ದಿನಾಂಕ 21–12–2012.
2) ಅಧಿಸೂ ಚನೆ ಸಂಖ್ಯೆ: ಬಿ9–ನೇಮಕಾತಿ–ವಿವ–4/2012 13 ದಿನಾಂಕ 13–03–2013.
3) ಈ ಕಚೇರಿಯ ಪ್ರಕಟಣೆ ದಿನಾಂಕ 14 –07–2015.

–0–

ಉಲ್ಲೇಖ (1) ಮತ್ತು (2)ರ ಈ ಕಚೇರಿಯ ಅಧಿಸೂಚನೆಗಳಲ್ಲಿ 113 ಉಪ ವಲಯ ಅರಣ್ಯಾಧಿಕಾರಿ ಹಾಗೂ 329 ಅರಣ್ಯ ರಕ್ಷಕ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಸಲುವಾಗಿ ಅಧಿಸೂಚನೆ ಹೊರಡಿಸಲಾಗಿತ್ತು. ನೇರ ನೇಮಕಾತಿಯ ಎಲ್ಲಾ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ, ಉಲ್ಲೇಖ (3)ರ ಈ ಕಚೇರಿಯ ಪ್ರಕಟಣೆಯಲ್ಲಿ 112 ಉಪ ವಲಯ ಅರಣ್ಯಾಧಿಕಾರಿ ಹಾಗೂ 302 ಅರಣ್ಯ ರಕ್ಷಕ ಹುದ್ದೆಗೆ ಆಯ್ಕೆಗೊಂಡ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಿ ಹಾಗೂ ಸ್ಥಳ ಹಂಚಿಕೆಯನ್ನು ಮಾಡಲಾಗಿರುತ್ತದೆ.

ಈ ಅಭ್ಯರ್ಥಿಗಳಿಗೆ ವೃತ್ತಿ ತರಬೇತಿಯ ಕುರಿತು ಮಾಹಿತಿಯ ವಿವರವನ್ನು ಸಧ್ಯದಲ್ಲಿಯೇ ನೀಡಲಾಗುವುದು.

ದಿನಾಂಕ 01–09–2015 ರಿಂದ ಆಯ್ಕೆಯಾದ ಎಲ್ಲಾ ಅಭ್ಯರ್ಥಿಗಳಿಗೆ ವೃತ್ತಿ ತರಬೇತಿ ಪ್ರಾರಂಭವಾಗಲಿರುವುದು ಹೀಗಾಗಿ ಈ ಕೆಳಕಂಡ ಅಂಶವನ್ನು ಗಮನದಲ್ಲಿಟ್ಟುಕೊಂಡು, ಸದರಿ ದಿನಾಂಕದೊಳಗೆ ಉಪ ವಲಯ ಅರಣ್ಯಾಧಿಕಾರಿ ಹುದ್ದೆಗೆ ಆಯ್ಕೆಗೊಂಡ ಅಭ್ಯರ್ಥಿಗಳಿಗೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಅರಣ್ಯ ರಕ್ಷಕ ಹುದ್ದೆಗೆ ಆಯ್ಕೆಗೊಂಡ ಅಭ್ಯರ್ಥಿಗಳಿಗೆ ಹಾಗೂ ನೇಮಕಾತಿ ಪ್ರಾಧಿಕಾರಿಯವರು ನೇಮಕಾತಿ ಆದೇಶ ನೀಡಿ ತರಬೇತಿಗೆ ನಿಯೋಜಿಸಲು ಕ್ರಮ ಕೈಗೊಳ್ಳುವುದು.

1) ಉಪ ವಲಯ ಅರಣ್ಯಾಧಿಕಾರಿ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳನ್ನು ನೇರವಾಗಿ ಆಯಾ ವೃತ್ತಗಳಿಗೆ ಹಂಚಿಕೆ ಮಾಡಿರುವುದರಿಂದ ಈ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ಸಂಬಂಧಿಸಿದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ನೇಮಕಾತಿ ಪ್ರಾಧಿಕಾರಿಗಳು ನೀಡುವುದು.

2) ಅರಣ್ಯ ರಕ್ಷಕ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳನ್ನು ನೇರವಾಗಿ ಆಯಾ ವಿಭಾಗಗಳಿಗೆ ಹಂಚಿಕೆ ಮಾಡಿರುವುದರಿಂದ ಈ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ಸಂಬಂಧಿಸಿದ ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ನೇಮಕಾತಿ ಪ್ರಾಧಿಕಾರಿಗಳು ನೀಡುವುದು.

3) ನಿಮ್ಮ ವೃತ್ತ ವ್ಯಾಪ್ತಿಯಲ್ಲಿ ವನ್ಯಜೀವಿ ವಿಭಾಗದಲ್ಲಿ ಖಾಲಿ ಇರುವ ಉಪ ವಲಯ ಅರಣ್ಯಾಧಿಕಾರಿ ಹುದ್ದೆಗಳನ್ನು ಆಧ್ಯತೆಯ ಮೇರೆಗೆ ಭರ್ತಿ ಮಾಡಲು ತಿಳಿಸಿದೆ.

4) ವೃತ್ತಿ ತರಬೇತಿ ಪ್ರಾರಂಭವಾಗುವ ಮುಂಚಿತವಾಗಿ ಅಭ್ಯರ್ಥಿಗಳು ಆಯಾ ಹುದ್ದೆಗೆ ನೇಮಕಾತಿ ಆದೇಶ ಪಡೆದು ವೃತ್ತಿ ತರಬೇತಿಗೆ ಹಾಜರಾಗಲು ಅನುವು ಮಾಡುವ ಸಲುವಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲು ಸಂಬಂಧಿಸಿದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ತಿಳಿಸಿದೆ:-

<u>ಕರಾರು ಪತ್ರ</u> (ರೂ.100/- ರ ಛಾಪಾ ಕಾಗದದಲ್ಲಿ):-

ಈಗಾಗಲೇ ಹಿಂದಿನ ಬಾರಿಯ ನೇರ ನೇಮಕಾತಿಯಲ್ಲಿ ತೆಗೆದುಕೊಂಡ ಕ್ರಮದಂತೆ ದಿನಾಂಕ 01-09-2015 ರಂದು ಪ್ರಾರಂಭವಾಗುವ ವೃತ್ತಿ ತರಬೇತಿಗೆ ಹಾಜರಾಗಬೇಕಾದ ಅಭ್ಯರ್ಥಿಗಳ ನೇಮಕಾತಿ ಕುರಿತು, ಅಭ್ಯರ್ಥಿಗಳ ಜಾತಿ ಪ್ರಮಾಣ ಪತ್ರಗಳ ಬಗ್ಗೆ ಸತ್ಯಾಪನೆ/ಸಿಂಧುತ್ವ/ಅಂಕಪಟ್ಟಿಗಳ ಬಗ್ಗೆ ಸತ್ಯಾಪನೆ/ಗ್ರಾಮೀಣ/ಕನ್ನಡ ಮಾಧ್ಯಮ/ಯೋಜನಾ ನಿರಾಶ್ರಿತ/ಮಾಜಿ ಸೈನಿಕ ದಾಖಲಾತಿಗಳು, ಇತ್ಯಾದಿ ಬಗ್ಗೆ ಸತ್ಯಾಪನೆ/ಪೊಲೀಸ್ ತಪಾಸಣಾ ವರದಿ ಮಾಡಿಸಲು ಎಲ್ಲಾ ಅಭ್ಯರ್ಥಿಗಳಿಗೆ ಕನಿಷ್ಠ 4 ರಿಂದ 6 ತಿಂಗಳು ಕಾಲಾವಕಾಶ ಬೇಕಾಗಿರುತ್ತದೆ. ಆಡಳಿತಾತ್ಮಕ ಕಾರಣಗಳಿಂದ ಆಯ್ಕೆಯಾದ ಅಭ್ಯರ್ಥಿಗಳಿಗೆ ತುರ್ತಾಗಿ ವೃತ್ತಿ ತರಬೇತಿಗೆ ನಿಯೋಜಿಸಬೇಕಾಗಿರುವ ಹಿನ್ನೆಲೆಯಲ್ಲಿ ಈ ಎಲ್ಲಾ ಅಭ್ಯರ್ಥಿಗಳಿಂದ ಲಿಖಿತ ರೂಪದಲ್ಲಿ ರೂ.100/- ರ ಛಾಪಾ ಕಾಗದದಲ್ಲಿ ಪೊಲೀಸ್ ಇಲಾಖೆಯಿಂದ ನೀಡಲ್ಪಡುವ ವರದಿಯಲ್ಲಿ ಹಾಗೂ ಜಾತಿ ಸಿಂಧುತ್ವದ ಬಗ್ಗೆಯೂ ನೀಡಲ್ಪಡುವ ವರದಿಯಲ್ಲಿ ಯಾವುದೇ ವ್ಯತಿರಿಕ್ತ ಷರಾ ಇದ್ದಲ್ಲಿ ಹಾಗೂ ಅಭ್ಯರ್ಥಿ ಮಾಜಿ ಸೈನಿಕನಾಗಿದ್ದಲ್ಲಿ, ಮಾಜಿ ಸೈನಿಕ ಪ್ರವರ್ಗದಡಿಯಲ್ಲಿ ರಾಜ್ಯ ಸರ್ಕಾರಿ ಸೇವೆಗೆ ಅರ್ಹರೇ ಎಂಬುದನ್ನು ಸಂಬಂಧಪಟ್ಟ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಇವರು ನೀಡುವ ವರದಿಯಲ್ಲಿ ವ್ಯತಿರಿಕ್ತ ಷರಾ ಇದ್ದಲ್ಲಿ ಹಾಗೂ ಅಂಕಪಟ್ಟಿಗಳ ಬಗ್ಗೆ ಇತ್ಯಾದಿ ಪ್ರಮಾಣ ಪತ್ರಗಳ ಸತ್ಯಾಪನೆಗಳಲ್ಲಿ ಯಾವುದಾದರೂ ವ್ಯತಿರಿಕ್ತ ಷರಾ ಇದ್ದಲ್ಲಿ ತನ್ನ ನೇಮಕಾತಿ ಕುರಿತು ಯಾವುದೇ ಮುನ್ಸೂಚನೆ ಇಲ್ಲದೆ ಈಗಾಗಲೇ ನೀಡಲಾಗಿರುವ ನೇಮಕಾತಿ ಆದೇಶವನ್ನು ರದ್ದುಪಡಿಸಿ ಸೇವೆಯಿಂದ ವಜಾಗೊಳಿಸುವ ಪೂರ್ಣ ಹಕ್ಕನ್ನು ಇಲಾಖೆ ಹೊಂದಿರುವ ಬಗ್ಗೆ ತನ್ನ ಪೂರ್ಣ ಸಮ್ಮತಿ ಇದೆಯೆಂದು ಅಭ್ಯರ್ಥಿಯಿಂದ ಲಿಖಿತ ರೂಪದಲ್ಲಿ ಮುಚ್ಚಳಿಕೆ ಬರೆಸಿಕೊಳ್ಳುವುದು ಹಾಗೂ ಈ ಅಂಶವನ್ನು ನೇಮಕಾತಿ ಆದೇಶದಲ್ಲಿಯೂ ಸಹ ಸ್ಪಷ್ಟವಾಗಿ ನಮೂದಿಸಿ, ಅಭ್ಯರ್ಥಿಗೆ ನೇಮಕಾತಿ ಆದೇಶ ನೀಡಿ ಅಭ್ಯರ್ಥಿಗಳನ್ನು ವೃತ್ತಿ ತರಬೇತಿಗೆ ನಿಯೋಜಿಸುವುದು.

ಅಭ್ಯರ್ಥಿಯು ಇನ್ನೊಂದು ರೂ.100/-ರ ಛಾಪಾ ಕಾಗದದಲ್ಲಿ **<u>INDEMNITY BOND</u>** ಅನ್ನು ಇಲಾಖಾ ಪರ ನೀಡಬೇಕಾಗಿದ್ದು, ಈ INDEMNITY BOND ನಲ್ಲಿ ಈ ಕೆಳಕಂಡ ಷರತ್ತುಗಳು ಒಳಗೊಂಡಿರಬೇಕಾಗಿದೆ:-

1. (1) ನೇಮಕಾತಿ ಪ್ರಾಧಿಕಾರದ ಸಮಕ್ಷಮ ರೂ.50,000-00 ಸಾಲ್ವೆನ್ಸಿ ಹೊಂದಿರುವ ಇಬ್ಬರು ಅಥವಾ ರೂ.14,550-00 ಗಿಂತ ಹೆಚ್ಚು ಮಾಸಿಕ ಮೂಲ ವೇತನ ಪಡೆಯುತ್ತಿರುವ ಮತ್ತು ತರಬೇತಿ ಮುಗಿಯುವ ದಿನಾಂಕದಿಂದ ಕನಿಷ್ಠ 6 ವರ್ಷ ಸೇವಾವಧಿ ಉಳಿದಿರುವ ಇಬ್ಬರು ಸರ್ಕಾರಿ ನೌಕರರ ಜಾಮೀನು ಕೊಡಬೇಕು.

   (2) ಇದು ಸಾಧ್ಯವಾಗದಿದ್ದ ಪಕ್ಷದಲ್ಲಿ ಅಭ್ಯರ್ಥಿಯು ರೂ.50,000-00 ಮೊತ್ತದ ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟನ್ನು ಸಂಬಂಧಪಟ್ಟ ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ನೇಮಕಾತಿ ಪ್ರಾಧಿಕಾರಿ ಇವರ ಹೆಸರಿಗೆ ಅಡವು ಇರಿಸಬಹುದು.

   (3) ಅಭ್ಯರ್ಥಿಯು ವೃತ್ತಿ ತರಬೇತಿಯನ್ನು ಸಮರ್ಪಕವಾಗಿ ಪೂರೈಸಿ ಆನಂತರ ಇಲಾಖೆಯಲ್ಲಿ ನೇಮಕಾತಿಯಾದ ದಿನಾಂಕದಿಂದ ಕನಿಷ್ಠ 5 ವರ್ಷ ಸೇವೆ ಸಲ್ಲಿಸುವುದಾಗಿ ಹಾಗೂ ತಾನು ಪ್ರಪ್ರಥಮವಾಗಿ ನೇಮಕಾತಿ ಹೊಂದಿದ ಸ್ಥಳದಲ್ಲಿ ಕನಿಷ್ಠ 5 ವರ್ಷಗಳ ಸೇವೆಯನ್ನು ಸಲ್ಲಿಸಲು ಸಿದ್ಧವಿರುವುದಾಗಿ ಸಹ ಒಪ್ಪಿರುವುದಾಗಿ ಕರಾರನ್ನು ಬರೆಸಿಕೊಳ್ಳುವುದು.

   (4) ಅಭ್ಯರ್ಥಿಯು ತರಬೇತಿ ವೇಳೆಯಲ್ಲಿ ಸ್ವಇಚ್ಛೆಯಿಂದ ತರಬೇತಿಯ ಮಧ್ಯದಲ್ಲಿ ಬಿಟ್ಟುಹೋದಲ್ಲಿ ಅಥವಾ ತರಬೇತಿಯನ್ನು ಸಮರ್ಪಕವಾಗಿ ಪೂರೈಸಲು ವಿಫಲರಾದಲ್ಲಿ ಅಥವಾ ಇಲಾಖೆಯು ಸೂಕ್ತ ಕಾರಣದಿಂದ ತರಬೇತಿಯ ಮಧ್ಯದಲ್ಲಿ ಅಭ್ಯರ್ಥಿಯನ್ನು ತೆಗೆದುಹಾಕಿದಲ್ಲಿ ಸರ್ಕಾರವು ತರಬೇತಿಯ ಬಗ್ಗೆ ಭರಿಸಿದ ಸಂಪೂರ್ಣ ವೆಚ್ಚವನ್ನು ಹಾಗೂ ತರಬೇತಿ ಅವಧಿಯಲ್ಲಿ ಪಡೆದ ವೇತನವನ್ನು ಶೇ.8 ರಂತೆ ದಂಡನೆ ಬಡ್ಡಿಯೊಂದಿಗೆ ಅಭ್ಯರ್ಥಿಯು ಹಾಗೂ ಜಾಮೀನುದಾರರು ಜಂಟಿಯಾಗಿ ಅಥವಾ ವೈಯಕ್ತಿಕವಾಗಿ ಸರ್ಕಾರಕ್ಕೆ ಪಾವತಿ ಮಾಡಲು ಸಿದ್ಧವಿರುವುದಾಗಿ ಒಪ್ಪಿರುವುದಾಗಿ ಸಹ ಕರಾರಿನಲ್ಲಿ ಬರೆಸಿಕೊಳ್ಳುವುದು.

ನಿಮ್ಮ ವಿಭಾಗಕ್ಕೆ ಹಂಚಿಕೆ ಮಾಡಲಾದ ಅಭ್ಯರ್ಥಿಗಳ ವೈಯಕ್ತಿಕ ಕಡತವನ್ನು ಈ ಕಚೇರಿಯಿಂದ **ದಿನಾಂಕ 20-07-2015 ರೊಳಗೆ** ರಂದು ಅಥವಾ ಅದಕ್ಕಿಂತ ಮುಂಚಿತವಾಗಿ ಪಡೆಯಲು ಒಬ್ಬ ಜವಾಬ್ದಾರಿಯುತ ನೌಕರರನ್ನು ನಿಯೋಜಿಸಲು ತಿಳಿಸಿದೆ ಹಾಗೂ ನಿಯೋಜಿಸಿದ ನೌಕರರ ಹೆಸರು, ಹುದ್ದೆ ಹಾಗೂ ಅವರ ದೃಢೀಕೃತ ಮಾದರಿ ಸಹಿಯೊಂದಿಗೆ ಈ ಕಚೇರಿಗೆ ಮಾಹಿತಿ ನೀಡಲು ತಿಳಿಸಿದೆ.

ಸಂಬಂಧಿಸಿದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ನೇಮಕಾತಿ ಪ್ರಾಧಿಕಾರಿಯು ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ಮುನ್ನ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ:-

1) ಅಭ್ಯರ್ಥಿಯು ಸಮಾಜಘಾತುಕ ಕೃತ್ಯಗಳಲ್ಲಿ ತೊಡಗಿಲ್ಲದೇ ಇರುವ ಬಗ್ಗೆ ಅಥವಾ ಅಪರಾಧಿಕರಣ ವ್ಯವಹಾರಗಳಲ್ಲಿ ಒಳಗಾಗದೇ ಇರುವ ಬಗ್ಗೆ ಸಂಬಂಧಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಂದ ಪರಿಶೀಲನಾ ವರದಿಯನ್ನು ಪಡೆದುಕೊಳ್ಳುವುದು. ಈ ವರದಿಯನ್ನು ಪಡೆದುಕೊಳ್ಳಲು ಸಂಬಂಧಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ನಿಮ್ಮ ಕಚೇರಿಯಿಂದ ಕೂಡಲೇ ಪತ್ರವನ್ನು ಕಳುಹಿಸುವುದು.
2) ಸಂಬಂಧಪಟ್ಟ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಇವರಿಂದ ಅಭ್ಯರ್ಥಿಗಳ ಜಾತಿ ಪ್ರಮಾಣ ಪತ್ರದ ಬಗ್ಗೆ ಸತ್ಯಾಪನೆ ವರದಿಯನ್ನು ತರಿಸುವುದು.
3) ಅಭ್ಯರ್ಥಿಗಳ ನೀಡಿದ ಅಂಕಪಟ್ಟಿಗಳು, ಗ್ರಾಮೀಣ, ಕನ್ನಡ ಮಾಧ್ಯಮ, ಯೋಜನಾ ನಿರಾಶ್ರಿತ, ಇತ್ಯಾದಿ ಪ್ರಮಾಣ ಪತ್ರಗಳ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರದಿಂದ ಸತ್ಯಾಪನೆ ವರದಿಯನ್ನು ತರಿಸುವುದು.
4) ಅಭ್ಯರ್ಥಿಯು ಮಾಜಿ ಸೈನಿಕ ಪ್ರವರ್ಗದಡಿಯಲ್ಲಿ ಆಯ್ಕೆಯಾಗಿದ್ದಲ್ಲಿ ಅಂತಹ ಅಭ್ಯರ್ಥಿಗಳ ಡಿಸ್‌ಚಾರ್ಜ್ ಪುಸ್ತಕ ಹಾಗೂ ಪಿಂಚಣಿ ಪಡೆಯುತ್ತಿರುವ ದಾಖಲೆಗಳನ್ನು ಸಂಬಂಧಿಸಿದ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಇವರಿಗೆ ಕಳುಹಿಸಿ ಅಭ್ಯರ್ಥಿಯು ಮಾಜಿ ಸೈನಿಕ ಪ್ರವರ್ಗದಡಿಯಲ್ಲಿ ರಾಜ್ಯ ಸರ್ಕಾರಿ ಸೇವೆಗೆ ಅರ್ಹರೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು.

ನಿಮ್ಮ ವೃತ್ತ ಹಾಗೂ ವಿಭಾಗಕ್ಕೆ ಹಂಚಿಕೆಯಾಗಿರುವ ಅಭ್ಯರ್ಥಿಗಳಿಗೆ ಅವರು ಆಯ್ಕೆಯಾಗಿರುವ ಕುರಿತು ನಿಮ್ಮ ಕಚೇರಿಗೆ ದಿನಾಂಕ 20-07-2015 ರೊಳಗಾಗಿ ಖುದ್ದಾಗಿ ಹಾಜರಾಗಲು ತಿಳಿಸಲಾಗಿರುತ್ತದೆ.

ಈ ಪತ್ರದೊಂದಿಗೆ ಕರಾರು ಪತ್ರದ ಪ್ರತಿ, ಇಂಡೆಮ್ನಿಟಿ ಬಾಂಡ್‌ನ ನಮೂನೆಯ ಪ್ರತಿ ಹಾಗೂ ನೇಮಕಾತಿ ಆದೇಶದ ಪ್ರತಿಯನ್ನು ಸಲಅಡಕಗೊಳಿಸಿದೆ.

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ**
**(ಮುಖ್ಯಸ್ಥರು, ಅರಣ್ಯ ಪಡೆ)**
**ಹಾಗೂ ಆಯ್ಕೆ ಪ್ರಾಧಿಕಾರ.**

ಪ್ರತಿಯನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.

ಪ್ರತಿಯನ್ನು ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮೌಲ್ಯಮಾಪನ, ಕಾರ್ಯಯೋಜನೆ ಸಂಶೋಧನೆ ಮತ್ತು ತರಬೇತಿ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.

ಪ್ರತಿಯನ್ನು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ತರಬೇತಿ), ಅರಣ್ಯ ತರಬೇತಿ ಸಂಸ್ಥೆ, ಗುಂಗರಗಟ್ಟಿ, ಧಾರವಾಡ ಇವರಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ ಹಾಗೂ ದಿನಾಂಕ 01-09-2015 ರಿಂದ ವೃತ್ತಿ ತರಬೇತಿಯು ಪ್ರಾರಂಭವಾಗಲಿರುವುದರಿಂದ ಸದರಿ ಅಭ್ಯರ್ಥಿಗಳನ್ನು ತರಬೇತಿ ಸಂಸ್ಥೆವಾರು ಹಂಚಿಕೆ ಮಾಡಲು ಕ್ರಮ ಕೈಗೊಳ್ಳುವುದು.